ಬೆಳಗ್ಗೆ ಎದ್ದಾಗ ಅವರಿಬ್ಬರಿಗೂ ದೊಡ್ಡ ಆಶ್ಚರ್ಯ ಕಾದಿತ್ತು. ಇವರು ಎದ್ದ ಮೇಲೆಯೂ ತುಂಬ ಹೊತ್ತಿನ ವರೆಗೆ ಮಲಗಿಯೇ ಇರುತ್ತಿದ್ದ ಅಜ್ಜಿಯ ಹಾಸಿಗೆ ಆಗಲೇ ಖಾಲಿಯಾಗಿತ್ತು. ಹಾಸಿಗೆಯ ಪಕ್ಕದಲ್ಲಿಯೇ ಇಟ್ಟುಕೊಂಡಿರುತ್ತಿದ್ದ ಆಕೆಯ ಚೀಲವೂ ಇರಲಿಲ್ಲ. 'ಹೋ ರಾತ್ರಿ ನಾವು ಮಾತಾಡಿಕೊಂಡದ್ದು ಆಕೆ ಕೇಳಿಸಿಕೊಂಡಿರಬೇಕು. ಹಾಗೆಯೇ ಇನ್ನು ಮುಂದೆಯೂ ಇಲ್ಲಿ ಇದ್ದರೆ ಚನ್ನಾಗಿರುವುದಿಲ್ಲ ಎನ್ನಿಸಿ ಹೊರಟೇ ಬಿಟ್ಟಳೇನೋ. ಹೇಳಿ ಹೋಗುವ ಎಂದು ಕಾದರೆ ಮನೆಯ ಯಜಮಾನಿತಿ ಪುನಃ ಇಲ್ಲೇ ಇರಲು ಒತ್ತಾಯಿಸುತ್ತಾಳೆ ಎಂದು ಹೆದರಿ ನಾವಿಬ್ಬರು ಏಳುವ ಮುನ್ನವೇ ಎದ್ದು ಹೋಗಿರಬೇಕು' ಎಂದುಕೊಂಡ ಗಂಡ ಹೆಂಡತಿ ಇಬ್ಬರೂ ತೀರಾ ನೊಂದುಕೊಂಡರು.

'ಪಾಪದ ಅಜ್ಜಿ ಮಗನನ್ನು ಹುಡುಕುತ್ತ ಎಲ್ಲಿ ಅಲೆಯುತ್ತಿದೆಯೋ ಈಗ. ನಾವು ಅಷ್ಟು ಗಟ್ಟಿಯಾಗಿ ಮಾತಾಡಿಕೊಳ್ಳಬಾರದಿತ್ತು' ಎಂದು ತಮ್ಮನ್ನು ತಾವೇ ಬೈದುಕೊಳ್ಳುತ್ತ ಆ ನೋವಿನಲ್ಲಿಯೇ ತಮ್ಮ ಮಾಮೂಲಿ ಕೆಲಸದಲ್ಲಿ ತೊಡಗಲು ಅನುವಾದರು.

ಹಾಗೆಯೇ ಮುಖ ತೊಳೆದುಕೊಂಡು ಅಡಿಗೆಮನೆಯೊಳಗಿನ ಕೆಲಸಕ್ಕೆಂದು ಒಳ ಹೊರಟ ಶ್ಯಾಮಲೆ ಕಿರುಚಿದ್ದಳು. ಆಕೆ ಕಿರುಚಿದ ಸದ್ದಿಗೆ ಬಚ್ಚಲು ಮನೆಗೆ ಹೊರಟಿದ್ದ ಶಾಂತಾರಾಮನೂ ಒಳಗೆ ಓಡಿ ಬಂದ.

'ಇಲ್ಲಿ ನೋಡಿ ದೇವರ ಹುಂಡಿ ಒಡೆದು ಬಿದ್ದಿದೆ... ನಿನ್ನೆ ಶುಕ್ರವಾರದ ಪೂಜೆಗೆ ಇಟ್ಟ ಲಕ್ಷ್ಮಿಯ ವಿಗ್ರಹದ ಜೊತೆ ಅದಕ್ಕೆ ಹಾಕಿದ ಚಿನ್ನ, ಎದುರಿಗಿಟ್ಟ ಚಿನ್ನ ಯಾವುದೂ ಇಲ್ಲ...' ಕೇಳಿದ ಇವ ಅವಾಕ್ಕಾಗಿ ನಿಂತ.

ಮುಂದಿನ ವರ್ಷ ನಡೆಸುವುದೆಂದು ಬಹಳ ಹಿಂದೆಯೇ ನಿಗದಿಯಾಗಿದ್ದ ಸುಮಾರು ಐವತ್ತು ಅರವತ್ತು ಸಾವಿರ ಖರ್ಚಿನ ದೇವರ ಕಾರ್ಯಕ್ರಮವೊಂದಕ್ಕೆ ಕಳೆದ ಮೂರು ವರ್ಷಗಳಿಂದ ಪ್ರತೀ ಶುಕ್ರವಾರ ಕನಿಷ್ಠ ನೂರಿನ್ನೂರನ್ನಾದರೂ ತುಂಬಿಸುತ್ತಿದ್ದ ಹುಂಡಿ ಅದು. ಹಾಗೆಯೇ ಪ್ರತೀ ಶುಕ್ರವಾರ ಶ್ಯಾಮಲೆ ಪೂಜೆಗಿಡುತ್ತಿದ್ದ ಆ ದೊಡ್ಡ ಗಾತ್ರದ ಬೆಳ್ಳಿಯ ಲಕ್ಷ್ಮಿಯ ವಿಗ್ರಹ ಮತ್ತು ಅದಕ್ಕೆ ಹಾಕಿದ ನಾಲ್ಕೆಳೆಯ ಚಿನ್ನದ ಸರದ ಜೊತೆಗೆ ಇವ, 'ಅದೆಲ್ಲ ಯಾತಕ್ಕೆ' ಎಂದು ಎಷ್ಟು ಸಲ ಹೇಳಿದರೂ ಕೇಳದೆ ಲಕ್ಷ್ಮಿಯೆದುರಿಗೆ ಅವಳು ಇಟ್ಟು ಪೂಜಿಸಿ ಆನಂದಿಸುತ್ತಿದ್ದ ತನ್ನ ಮದುವೆಯ ಕಾಲದ ಆಭರಣಗಳಿಂದ ಹಿಡಿದು ಅನಂತರದ ದಿನಗಳಲ್ಲಿ ಕೊಂಡು ಕೊಂಡ ಇತರೆ ಆಭರಣಗಳು. ಎಲ್ಲ ಸೇರಿ ಏನಿಲ್ಲವೆಂದರೂ ಒಂದೈವತ್ತು ಪವನಿನಷ್ಟಾದರೂ ಆದೀತು.

ಲೆಕ್ಕ ಹಾಕುತ್ತ ಹಾಕುತ್ತ ಗಂಡ ಹೆಂಡತಿ ಗರಬಡಿದವರಂತೆ ನಿಂತೇ ಇದ್ದರು. ತಾವಿಬ್ಬರೂ ಮುದುಕಿಯ ಬಗ್ಗೆ ಕನಿಕರ ಮತ್ತು ಔದಾರ್ಯ ತೋರಿಸಿದಾಗಲೆಲ್ಲ ಆಕೆಯ ಮುಖದ ಮೇಲೆ ಮಿನುಗಿ ಮಾಯವಾಗುತ್ತಿದ್ದ ಆ ಒಂದು ಹುಸಿನಗೆ ಅವರಿಗೆ ನೆನಪಾಗಲೂ ಇಲ್ಲ. ಅಲ್ಲ... ಇವರು ಗಮನಿಸಿದ್ದರಲ್ಲವೇ ನೆನಪಾಗುವುದು!

**ಪಿ.ಪಿ. ಉಪಾಧ್ಯ**

ಭಾರತೀಯ ಜೀವ ವಿಮಾ ನಿಗಮದಲ್ಲಿ ಹಿರಿಯ ವಿಭಾಗಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ. ಅವರ 100ಕ್ಕೂ ಹೆಚ್ಚು ಕತೆಗಳು ಪತ್ರಿಕೆಗಳಲ್ಲಿ ಅಚ್ಚಾಗಿವೆ. 'ಯಶೋದೆ' ಮತ್ತು 'ಹೊಸ ಬೆಳಕು' ಎಂಬ ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟವಾಗಿವೆ. 'ತ್ಯಾಂಪಣ್ಣನ ಸೊಸೆಯಂದಿರು' ಎಂಬ ಕಾದಂಬರಿ, 'ಕಳೆದುಕೊಂಡಿದ್ದು ಮತ್ತು ಇತರ ಕತೆಗಳು' ಎಂಬ ಕಥಾಸಂಕಲನ ಪ್ರಕಟವಾಗಿವೆ. ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ಮೂರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.